# ದ್ವಿತೀಯ ಪಿಯುಸಿ ಪ್ರಥಮ ತ್ರೈಮಾಸಿಕ ಪರೀಕ್ಷೆ, ಆಗಸ್ಟ್ 2024

## ವಿಷಯ: ಕನ್ನಡ (1)

**ಅವಧಿ : 1 ಗಂಟೆ–30 ನಿಮಿಷ** **ಗರಿಷ್ಠ ಅಂಕಗಳು : 40**

ವಿಭಾಗ–ಅ

**I ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ: 4x1=4**

1. ಸೀತೆಯನ್ನು ರಾವಣ ಎಲ್ಲಿರಿಸಿದ್ದನು?
   ಅ) ಅಶೋಕವನ ಆ) ಪ್ರಮದವನ ಇ) ಜಿಂಕೆವನ ಈ) ಧನ್ವಂತ್ರಿವನ
2. ಯಾವುದರಿಂದ ಪರಿಮಳವನ್ನು ಅರಿಯಬಹುದು?
   ಅ) ಪುಷ್ಪಗಳಿಂದ ಆ) ಹಣ್ಣುಗಳಿಂದ ಇ) ಕಾಯಿಗಳಿಂದ ಈ) ಕಾಂಡಗಳಿಂದ
3. ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ಯಾವುದು?
   ಅ) ಆನೆ ಆ) ಹುಲಿ ಇ) ಕೋತಿ ಈ) ಕರಡಿ
4. ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು?
   ಅ) ಸುತ್ತೂರು ಆ) ಅಂಕನಹಳ್ಳಿ ಇ) ಗವಿಮಠ ಈ) ಗೂಳೂರು ಮಠ

**ಆ) 5. ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: 3x1=3**
**(ಪೂಣಚ್ಚಿ, ಸಿದ್ಲಿಂಗಿ, ಕಾರ್ವೆರ್ ಮಾರ್ಷ್)**

ಕ) ಬಸಲಿಂಗನ ಹೆಂಡತಿಯ ಹೆಸರು __________
ಚ) ಮಾರ್ಷನ ಜೊತೆಗಾರನ ಹೆಸರು __________
ಟ) ವಾಲ್‌ಪರೈಗೆ ಬಂದ ಬ್ರಿಟಿಷ್ ಪ್ರಜೆ __________

**ಇ) 6. ಹೊಂದಿಸಿ ಬರೆಯಿರಿ: 3x1=3**

| | | |
|---|---|---|
| 1. ಕದಡಿದ ಸಲಿಲಂ ತಿಳಿವಂದದೆ | – | ಕೂಡಲ ಸಂಗಮ ದೇವಾ |
| 2. ಬಸವಣ್ಣ | – | ನಾಗಚಂದ್ರ |
| 3. ಕುಮಾರವ್ಯಾಸ | – | ಉರಿಲಿಂಗ ಪೆದ್ದಿ |
| | – | ರೂಪಕ ಸಾಮ್ರಾಜ್ಯದ ಚಕ್ರವರ್ತಿ |

**II ಅ) ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 2x2=4**

7. ಸೀತೆಯ ತಲ್ಲಣಕ್ಕೆ ಕಾರಣವೇನು ?
8. ಗುರುವಿನ ಲಕ್ಷಣಗಳೇನು ?
9. ತಾನು ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ ?

**ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 2x1=2**

10. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು ?
11. ಬ್ರಿಟಿಷರು ಬರುವ ಮೊದಲು ವಾಲ್‌ಪರೈ ಹೇಗಿತ್ತು ?

**ಇ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 2x1=2**

12. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು ?
13. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು ?

**III (ಅ) ಕೆಳಗಿನ ವಾಕ್ಯಗಳಲ್ಲಿ ಒಂದಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ : 1x3=3**

14. ಕದಡಿದ ಸಲಿಲಂ ತಿಳಿವಂದದೆ.
15. ಒಬ್ಬಳನಾಳಲಾರಿರಿ ಗಂಡರೋ ನೀವ್ ಭಂಡರೋ

**(ಆ) ಕೆಳಗಿನ ಗದ್ಯ ಮತ್ತು ದೀರ್ಘಗದ್ಯದ ವಾಕ್ಯಗಳಲ್ಲಿ ಒಂದಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ: 1x1=3**

16. ಹಾಡುವುದು ಅವುಗಳಿಗೆ ಅನಿವಾರ್ಯ : ಅವುಗಳ ಕರ್ಮ !
17. ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದ ಹಾಗೆ.

(ಪು.ತಿ.ನೋ)

IV (ಅ) ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 1x4=4

18. ಪ್ರಮದವನದಲ್ಲಿ ರಾವಣ–ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

19. ಶಿಪಥವನ್ನರಿಯದವನ ಭಕ್ತಿ ನಿರರ್ಥಕವೆಂಬುದನ್ನು ಬಸವಣ್ಣ ಯಾವ ಯಾವ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ?

(ಆ) ಕೆಳಗಿನ ಗದ್ಯ ಮತ್ತು ದೀರ್ಘಗದ್ಯದ ಪ್ರಶ್ನೆಗಳಲ್ಲಿ ಒಂದಕ್ಕೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 1x4=4

20. ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು ?

21. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗ ಹಾಕಲು ಮಠದವರು ಹವಣಿಸಿದ್ದೇಕೆ ?

V (ಅ) ಕೆಳಗಿನ ಎರಡು ಪ್ರಶ್ನೆಗಳಿಗೆ ಸೂಚನೆಗನುಗುಣವಾಗಿ ಉತ್ತರಿಸಿ : 2x2=4

22. ಕೆಳಗಿನ ಎರಡು ಪದಗಳ ಅರ್ಥ ಬರೆಯಿರಿ:

1. ಸಲಿಲ 2. ಪುಳಕ 3. ತೃಷೆ

23. ಕೆಳಗಿನ ಎರಡು ಪದಗಳ ಗುಣವಾಚಕ ಪದ ಬರೆಯಿರಿ:

1. ವಕ್ತ್ರಪದ್ಮ 2. ನಳಿನಾನನೆ 3. ಶುದ್ಧನೀರು

24. ಕೆಳಗಿನ ಎರಡು ಪದಗಳ ನಾನಾರ್ಥ ಬರೆಯಿರಿ:

1. ಅರ್ಥ 2. ಕರ 3. ಕಳೆ

(ಆ) ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ: 1x4=4

25. ಮೂರು ದಿವಸಗಳ ರಜೆಯನ್ನು ಕೇಳಿ ಪ್ರಾಂಶುಪಾಲರಿಗೆ ಪತ್ರ ಬರೆಯಿರಿ.

(ಸೂಚನೆ : ಹೆಸರಿಗೆ ಬದಲಾಗಿ ಅಬಕ ಎಂದು ಸ್ಥಳದ ಹೆಸರಿಗೆ ಕಚಟತಪ ಎಂದು ನಮೂದಿಸುವುದು)

ಅಥವಾ

ಕೆಳಗಿನ ವಿಷಯ ಕುರಿತು ಪ್ರಬಂಧ ಬರೆಯಿರಿ.

ಮೂಢನಂಬಿಕೆಗಳು

*****